**ದಿನಾಂಕಃ 30.01.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**
**ಪಾಟೀಸವಾಲುಃ 1 ಮತ್ತು 7ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಾಗೂ 2 ಮತ್ತು 3ನೇ ವಾದಿಯರು ನಾರಸೀಗೌಡರ ಮಕ್ಕಳು. 1ನೇ ಪ್ರತಿವಾದಿ ಉಮಾರವರು ನನ್ನ ತಂದೆಯ ತಮ್ಮ ನರಸೇಗೌಡರ ಹಿರಿಯ ಮಗ ನರಸಿಂಹಯ್ಯನವರ ಮಗಳು. 7ನೇ ಪ್ರತಿವಾದಿ ಯಶೋದರವರು ನನ್ನ ಚಿಕ್ಕಪ್ಪ ನರಸೇಗೌಡರ ಮಗ ನರಸಿಂಹಮೂರ್ತಿಯವರ ಪತ್ನಿ. ದಾವಾ ಆಸ್ತಿಗಳ ಪಹಣಿ 1 ಮತ್ತು 7ನೇ ಪ್ರತಿವಾದಿಯರ ಹೆಸರಿನಲ್ಲಿ ಇರುವುದಿಲ್ಲ, ನನ್ನ ತಂದೆ ಎಂ.ಹೆಚ್.ಪಟ್ನದಲ್ಲಿ ಯಾವತ್ತೂ ವಾಸಮಾಡಿರಲಿಲ್ಲ ಎಂದರೆ ಸರಿಯಲ್ಲ, ಎಂ.ಹೆಚ್.ಪಟ್ನದಲ್ಲಿ ನನ್ನ ತಂದೆ ವಾಸವಾಗಿದ್ದರು ಎಂದು ಹೇಳಿರುವ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ,

ನನ್ನ ತಂದೆ ಚಿಕ್ಕಂದಿನಿಂದಲೂ ಕೋಡಿಮುದ್ದೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸುಳ್ಳು. ಚಿಕ್ಕನರಸಯ್ಯನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಈ ದಾವೆಯಲ್ಲಿ ಲಕ್ಷ್ಮೀನರಸಮ್ಮನವರ ವಾರಸುದಾರರನ್ನು ಮತ್ತು ಹೊನ್ನಮ್ಮನವರ ವಾರಸುದಾರರನ್ನು ಸೇರಿಸಿರುವುದಿಲ್ಲ, ದಾವಾ ಆಸ್ತಿಗಳು ಪ್ರತಿವಾದಿಯರು ಸಂಪಾದಿಸಿದ ಆಸ್ತಿಗಳು ಎಂದರೆ ಸುಳ್ಳು. ಎಲ್ಲಾ ದಾವಾ ಆಸ್ತಿಗಳು ನನ್ನ ತಾತನ ಹೆಸರಿನಲ್ಲಿಯೇ ಇರುತ್ತದೆ. ದಾವಾ ಸ್ವತ್ತಿಗೂ ಮತ್ತು ನಮಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ,

ದಿನಾಂಕ 11.01.2016ರಂದು ಪ್ರತಿವಾದಿಯರಿಗೆ ನೋಟೀಸು ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ಪ್ರತಿವಾದಿಯರ ಬಳಿ ಆಸ್ತಿಯಲ್ಲಿ ಭಾಗ ನೀಡುವಂತೆ ಕೋರಿ ಯಾವುದೇ ಪಂಚಾಯತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ದಾವಾ ಐಟಂ ನಂಬರ್ 8 ಸರ್ವೆ ನಂಬರ್ 7/4 ನರಸಿಂಹಯ್ಯನವರು ಖರೀದಿಸಿದ ಆಸ್ತಿ ಎಂದರೆ ಸರಿ. ದಾವಾ ಐಟಂ ನಂಬರ್ 9ರ ಸ್ವತ್ತು 1ನೇ ಪ್ರತಿವಾದಿಯ ತಾಯಿ ಹನುಮಕ್ಕನವರಿಗೆ ಅವರ ತಂದೆ ದಾನಪತ್ರದ ಮೂಲಕ ನೀಡಿದ ಆಸ್ತಿಯಾಗಿದ್ದು ಅದು ಒಟ್ಟು ಕುಟುಂಬದ ಆಸ್ತಿಯೂಗಿರುವುದಿಲ್ಲ ಎಂದರೆ ಸರಿಯಲ್ಲ, ದಾವಾ ಐಟಂ ನಂಬರ್ 8 ಮತ್ತು 9ನ್ನು ದುರುದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿರುತ್ತೇನೆಂದರೆ ಸರಿಯಲ್ಲ,

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಸಹಿ/-

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,
ಗುಬ್ಬಿ.